## ಪ್ರಧಾನ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಹುಮನಾಬಾದ.

ಸಿ.ಸಿ. ನಂ.4735-2023
ಸಿಡಬ್ಲ್ಯೂ.10 ಪಿಡಬ್ಲ್ಯೂ.6

ಸಾಕ್ಷಿಯ ಹೆಸರು - ಮುಸ್ತಫಾಹುಸೇನ

ತಂದೆಯ ಹೆಸರು - ಮಹಮ್ಮದ ಹುಸೇನ

ವಯಸ್ಸು - 34 ವರ್ಷ

ಉದ್ಯೋಗ - ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ

ವಾಸ -ಹುಮನಾಬಾದ

ದಿನಾಂಕಃ 28-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದಃ

ನಾನು 2020 ರಿಂದ ಇಲ್ಲಿಯವರೆಗೆ ಸರ್ಕಾರಿ ಆಸ್ಪತ್ರೆ ಹುಮನಾಬಾದದಲ್ಲಿ ವೈದ್ಯಾಧಿಕಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದೇನೆ.

ದಿನಾಂಕ: 19.04.2023 ರಂದು ರಾತ್ರಿ 10.30 ಗಂಟೆಗೆ ನಾನು ಆಸ್ಪತ್ರೆಯ ಕರ್ತವ್ಯ ಮೇಲೆ ಇದ್ದಾಗ ಚಾಸಾ.1 ರವರು ಹಲ್ಲೆಯ ಹಿನ್ನಲೆಯಲ್ಲಿ ಚಿಕಿತ್ಸೆಗಾಗಿ ಬಂದಿದ್ದರು ಅವರನ್ನು ಪರಿಶೀಲಿಸಿ ನೋಡಲಾಗಿ,

ಚಾಸಾ.1 ರವರನ್ನು ಪರಿಶೀಲಿಸಿ ನೋಡಲಾಗಿ

1) ಎದೆಯ ಮೇಲೆ ಗುಪ್ತ ಗಾಯ.

2) ತಲೆಯ ಹಿಂಭಾಗದಲ್ಲಿ ತರಚಿದ ಗಾಯ- 3 X 1 X 1 ಸೇ.ಮೀ.

ಮೇಲಿನ ಎಲ್ಲಾ ಗಾಯಗಳು ಸಾದಾ ಸ್ವರೂಪ ಗಾಯಗಳು ಆಗಿದ್ದು ಹಾಗೂ 4 ತಾಸಿನೊಳಗಿನ ಗಾಯಗಳು ಆಗಿರುತ್ತವೆ ಈ ಬಗ್ಗೆ ಗಾಯದ ಪ್ರಮಾಣ ಪತ್ರಗಳನ್ನು ನೀಡಿರುತ್ತೇನೆ.

ಸಾಕ್ಷಿಯು ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.4 ಎಂದು, ಸಾಕ್ಷಿಯ ಸಹಿಯನ್ನು ನಿಪಿ.4(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲು: ಆರೋಪಿತರ ಪರ ಶ್ರೀ.ಎ.ಎಂ.ಟಿ. ರವರಿಂದ :

ಚಾಸಾ.1 ರವರ ಜೊತೆ ಆ ದಿನ ಯಾರು ಬಂದಿರಲಿಲ್ಲ. ಚಾಸಾ.1 ರವರು ಚಿಕಿತ್ಸೆಗಾಗಿ ಬಂದ ವಿಚಾರವನ್ನು ನಾನು ಪೋಲಿಸರಿಗೆ ತಿಳಿಸಿರುತ್ತೇನೆ. ನನ್ನ ಸಮಕ್ಷಮ ಪೋಲಿಸರು ಚಾಸಾ.1 ರವರ ಹೇಳಿಕೆಯನ್ನು ಪಡೆದಿರುತ್ತಾರೆ. ಸಾಮಾನ್ಯವಾಗಿ ಗಟ್ಟಿ ಸ್ಥಳದ

ಮೇಲೆ ಬಿದ್ದರೆ ನಿಪಿ.4 ರಲ್ಲಿರುವ ಗಾಯಗಳು ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ಪೋಲಿಸರು ಮಾತು ಕೇಳಿ ಸುಳ್ಳು ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಹುಮನಾಬಾದ.